# ಸಲಫಿಯ್ಯತ್ ಎಂದರೇನು?

## [ ما هي السلفية؟ ]

**[Kannada – ಕನ್ನಡ – كنادي ]**


**ಅಶ್ಶೈಖ್ ಮುಹಮ್ಮದ್ ಇಬ್ನ್ ಸಾಲಿಹ್ ಅಲ್‌ಉಸೈಮೀನ್**

**الشيخ محمد ابن صالح العثيمين**

**ಅನುವಾದ: ಮುಹಮ್ಮದ್ ಹಂಝ಼ಾ ಪುತ್ತೂರು**

**ترجمة: محمد حمزة بتوري**



IslamHouse.com

**1436 – 2015**

بِسْمِ اللهِ الرَّحْمَـنِ الرَّحِيم

‘ಸಲಫಿಯ್ಯತ್’ ಎಂದರೆ ಅದು ಪ್ರವಾದಿ(ﷺ)ರವರ ಮತ್ತು ಅವರ ಸಹಾಬಾಗಳ ಮಾರ್ಗವನ್ನು ಹಿಂಬಾಲಿಸುವುದು. ಯಾಕೆಂದರೆ ಅವರು ನಮಗಿಂತ ಮುಂಚೆ ಗತಿಸಿದವರು ಮತ್ತು ಅವರು ನಮ್ಮ ಪೂರ್ವಿಕರು. ಅವರನ್ನು ಹಿಂಬಾಲಿಸುವುದನ್ನೇ ‘ಸಲಫಿಯ್ಯತ್’ ಎನ್ನಲಾಗುತ್ತದೆ.

ಆದರೆ ಒಂದು ಗುಂಪು ಜನರು ಪ್ರತ್ಯೇಕವಾಗಿ ನಿಂತು ‘ಸಲಫಿಯ್ಯತ್ತ’ನ್ನು ವಿಶೇಷ ಮನ್‌ಹಜ್ ಆಗಿ ಮಾಡಿಕೊಂಡು ಮುಸ್ಲಿಮರ ಪೈಕಿ ತಮಗೆ ವಿರುದ್ಧವಾಗಿ ಅಭಿಪ್ರಾಯ ಹೊಂದಿರುವವರನ್ನೆಲ್ಲ –ಅವರು ಸತ್ಯದಲ್ಲಿದ್ದರೂ ಸಹ– ಪಥಭ್ರಷ್ಟರೆಂದು ಹೇಳುತ್ತಾ ಸಾಗುವುದು ಹಾಗೂ ‘ಸಲಫಿಯ್ಯತ್ತ’ನ್ನು ಒಂದು ಗುಂಪುಗಾರಿಕೆಯ ಮನ್‌ಹಜ್ ಆಗಿ ಮಾರ್ಪಡಿಸುವುದು ‘ಸಲಫಿಯ್ಯತ್’ಗೆ ವಿರುದ್ಧವಾಗಿದೆ ಎಂಬುದರಲ್ಲಿ ಅನುಮಾನವೇ ಇಲ್ಲ.

ಸಲಫ್‌ಗಳೆಲ್ಲರೂ ಇಸ್ಲಾಮಿನೆಡೆಗೆ ಮತ್ತು ಅಲ್ಲಾಹನ ಗ್ರಂಥ ಹಾಗೂ ರಸೂಲ್(ﷺ)ರವರ ಸುನ್ನತ್ತಿನ ಸುತ್ತ ಒಟ್ಟುಗೂಡುವುದರೆಡೆಗೆ ಕರೆ ನೀಡುವವರಾಗಿದ್ದರು. ವ್ಯಾಖ್ಯಾನದ ವಿಷಯದಲ್ಲಿ ಅವರಿಗೆ ವಿರುದ್ಧವಾಗಿ ಅಭಿಪ್ರಾಯ ಹೊಂದಿದ್ದ ಯಾರನ್ನೂ ಅವರು ಪಥಭ್ರಷ್ಟರೆಂದು ಕರೆಯುತ್ತಿರಲಿಲ್ಲ. ಆದರೆ ಅಕಾಇದ್ (ವಿಶ್ವಾಸ)ಗೆ ಸಂಬಂಧಿಸಿದ ವಿಷಯದ ಹೊರತು. ಅಕಾಇದ್‌ನ ವಿಷಯದಲ್ಲಿ ವಿರೋಧಾಭಿಪ್ರಾಯ ಹೊಂದುವವನು ಪಥಭ್ರಷ್ಟನಾಗಿರುವನು ಎಂಬ ಅಭಿಪ್ರಾಯವನ್ನು ಸಲಫ್‌ಗಳು ಹೊಂದಿದ್ದರು. ಆದರೆ ಅಮಲಿಯ್ಯಾತ್ (ಕರ್ಮ)ಕ್ಕೆ ಸಂಬಂಧಿಸಿದ ವಿಷಯದಲ್ಲಿ ಅವರು ಅತ್ಯಧಿಕ ರಿಯಾಯಿತಿ ತೋರಿಸುತ್ತಿದ್ದರು.

ಆದರೆ ನಮ್ಮ ಈ ಕಾಲದಲ್ಲಿ ‘ಸಲಫಿಯ್ಯತ್ತ’ನ್ನು ತಮ್ಮ ಮನ್‌ಹಜ್ (ಮಾರ್ಗ) ಆಗಿ ಮಾಡಿಕೊಂಡ ಕೆಲವರು ತಮಗೆ ವಿರುದ್ಧವಾಗಿ

ಅಭಿಪ್ರಾಯ ಹೊಂದುವವರನ್ನೆಲ್ಲ –ಅವರ ಬಳಿ ಸತ್ಯವಿದ್ದರೂ ಸಹ– ಪಥಭ್ರಷ್ಟರೆಂದು ಸಾರುತ್ತಿದ್ದಾರೆ. ಇಸ್ಲಾಮಿನೊಂದಿಗೆ ಥಳಕು ಹಾಕಿಕೊಂಡಿರುವ ಇತರೆಲ್ಲ ಗುಂಪುಗಳಂತೆ ಇವರು ಕೂಡ 'ಸಲಫಿಯ್ಯತ್ತ'ನ್ನು ಒಂದು ಗುಂಪನ್ನಾಗಿ ಮಾಡಿಕೊಂಡಿದ್ದಾರೆ. ಇದು ವಿರೋಧಿಸಲ್ಪಡಬೇಕಾದ ವಿಷಯವಾಗಿದೆ. ಇದನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ.

ಅಸ್ಸಲಫು ಸ್ಸಾಲಿಹೀನ್‌ಗಳ ಮಾರ್ಗದೆಡೆಗೆ ನೋಡಿರಿ. ತಮ್ಮ ಮನ್‌ಹಜ್‌ನಲ್ಲಿ ಮತ್ತು ಇಜ್ತಿಹಾದ್‌ಗೆ ಅವಕಾಶವಿರುವ ವಿಷಯಗಳಲ್ಲಿ ವಿರೋಧಾಭಿಪ್ರಾಯ ಉದ್ಭವವಾದರೆ ಅವರೇನು ಮಾಡುತ್ತಿದ್ದರು? ಅವರು ಅನೇಕ ದೊಡ್ಡ ದೊಡ್ಡ ವಿಷಯಗಳಲ್ಲಿ ಭಿನ್ನಾಭಿಪ್ರಾಯ ಹೊಂದಿದ್ದರು. ಅಕೀದಃಕ್ಕೆ ಸಂಬಂಧಿಸಿದ (ಅಂದರೆ ಇಜ್ತಿಹಾದ್‌ಗೆ ಅವಕಾಶವಿರುವ) ವಿಷಯದಲ್ಲೂ, ಅಮಲಿಯ್ಯಾತ್‌ಗೆ ಸಂಬಂಧಿಸಿದ ವಿಷಯದಲ್ಲೂ ಭಿನ್ನಾಭಿಪ್ರಾಯ ಹೊಂದಿದ್ದರು. ಉದಾಹರಣೆಗೆ, ರಸೂಲ್(ﷺ)ರವರು ಅಲ್ಲಾಹನನ್ನು ನೋಡಿದ್ದಾರೆ ಎಂಬ ವಿಷಯವನ್ನು ಅವರಲ್ಲಿ ಕೆಲವರು ನಿಷೇಧಿಸಿದರೆ ಕೆಲವರು ದೃಢೀಕರಿಸಿದ್ದರು. ಅಂತ್ಯದಿನದಂದು ತೂಕ ಮಾಡಲಾಗುವುದು ಮನುಷ್ಯರ ಕರ್ಮಗಳನ್ನಾಗಿವೆ ಎಂದು ಅವರಲ್ಲಿ ಕೆಲವರು ಹೇಳಿದರೆ ಇತರ ಕೆಲವರು ಕರ್ಮಗಳನ್ನಲ್ಲ, ಕರ್ಮ ದಾಖಲೆಗಳನ್ನಾಗಿವೆ ಎನ್ನುತ್ತಿದ್ದರು. ಅವರು ಫಿಕ್‌ಹ್‌ಗೆ ಸಂಬಂಧಿಸಿದ ವಿಷಯಗಳಲ್ಲಿ ಹೇರಳ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದರು. ನಿಕಾಹ್‌ನ ವಿಷಯದಲ್ಲೂ, ಉತ್ತರಾಧಿಕಾರದ ವಿಷಯದಲ್ಲೂ, ಇದ್ದಃದ ವಿಷಯದಲ್ಲೂ, ಕ್ರಯವಿಕ್ರಯಕ್ಕೆ ಸಂಬಂಧಿಸಿದ ವಿಷಯದಲ್ಲೂ ಹಾಗೂ ಇನ್ನಿತರ ಅನೇಕ ವಿಷಯಗಳಲ್ಲಿ ಭಿನ್ನಾಭಿಪ್ರಾಯ ಹೊಂದಿದ್ದರು. ಆದರೂ ಅವರಲ್ಲಿ ಕೆಲವರು ಇತರ ಕೆಲವರನ್ನು ಪಥಭ್ರಷ್ಟರೆಂದು ಸಾರುತ್ತಿರಲಿಲ್ಲ.

ಆದ್ದರಿಂದ 'ಸಲಫಿಯ್ಯತ್' ಅಂದರೆ ತಮ್ಮ ಹೊರತಾದ ಇತರರನ್ನು ಪಥಭ್ರಷ್ಟರೆಂದು ಸಾರುವಂತಹ ಕೆಲವು ವೈಶಿಷ್ಟ್ಯತೆಗಳನ್ನು ಹೊಂದಿರುವ ಒಂದು ವಿಶೇಷ ಗುಂಪು ಎಂದು ಯಾರಾದರೂ ಅರ್ಥ

ಮಾಡಿಕೊಳ್ಳುವುದಾದರೆ ಅವರಿಗೆ 'ಸಲಫಿಯ್ಯತ್' ದೊಂದಿಗೆ ಯಾವುದೇ ಸಂಬಂಧವೂ ಇಲ್ಲ.

ಆದ್ದರಿಂದ 'ಸಲಫಿಯ್ಯತ್' ಎಂದರೆ ವಿಶ್ವಾಸದಲ್ಲಿ, ಮಾತಿನಲ್ಲಿ, ಕರ್ಮದಲ್ಲಿ, ಸಹಿಷ್ಣುತೆಯಲ್ಲಿ, ಒಗ್ಗಟ್ಟಿನಲ್ಲಿ, ಕರುಣೆ ತೋರುವುದರಲ್ಲಿ ಮತ್ತು ಪರಸ್ಪರ ಪ್ರೀತಿಸುವುದರಲ್ಲಿ ಅಸ್ಸಲಫು ಸ್ಸಾಲಿಹ್‌ಗಳ ಮಾರ್ಗವನ್ನು ಹಿಂಬಾಲಿಸುವುದಾಗಿದೆ. ಪ್ರವಾದಿ(ﷺ)ರವರು ಹೇಳಿದಂತೆ: "ಪರಸ್ಪರ ಪ್ರೀತಿಸುವುದರಲ್ಲಿ, ಪರಸ್ಪರ ಕರುಣೆ ತೋರುವುದರಲ್ಲಿ ಮತ್ತು ಪರಸ್ಪರ ಅನುಕಂಪ ತೋರಿಸುವುದರಲ್ಲಿ ವಿಶ್ವಾಸಿಗಳ ಉದಾಹರಣೆಯು ಏಕೈಕ ಶರೀರದಂತೆ." ಇನ್ನೊಂದು ವರದಿಯಲ್ಲಿ: "ಪರಸ್ಪರ ಪ್ರೀತಿಸುವುದರಲ್ಲಿ, ಪರಸ್ಪರ ಕರುಣೆ ತೋರುವುದರಲ್ಲಿ ಮತ್ತು ಪರಸ್ಪರ ಅನುಕಂಪ ತೋರಿಸುವುದರಲ್ಲಿ ವಿಶ್ವಾಸಿಗಳ ಉದಾಹರಣೆಯು ಏಕೈಕ ಶರೀರದಂತೆ. ಅದರ (ಶರೀರದ) ಒಂದು ಅಂಗವು ನೋವಿನಿಂದ ಮೊರೆಯಿಟ್ಟರೆ ಸಂಪೂರ್ಣ ಶರೀರವು ಜ್ವರ ಮತ್ತು ನಿದ್ದೆಗೆಡುವ ಮೂಲಕ ಅದರೆಡೆಗೆ ಧಾವಿಸುವುದು." ಇದಾಗಿದೆ ನೈಜ 'ಸಲಫಿಯ್ಯತ್'.

[ಲಿಕಾಉಲ್ ಬಾಬಿಲ್ ಮಫ್ತೂಹ್]

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين .

*********